ಅಧ್ಯಕ್ಷರು.—ನಾನು ನಿರಾಕರಣೆ ಮಾಡಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ, ನಾನು ರೂಲಿಂಗ್ ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು.— ಇವರ ಕ್ರಿಯಾಲೋಪವನ್ನು ಎತ್ತಿ ಹಿಡಿದಿದ್ದೇನೆ. ನಿಮ್ಮ ಕ್ರಿಯಾಲೋಪವನ್ನು ತಳ್ಳಿ ಹಾಕಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ಕಾರದ ಧೋರಣೆ ಮಾನ್ಯ ಶಾಸಕರುಗಳನ್ನು ಅವಮಾನ ಮಾಡತಕ್ಕ...

ಅಧ್ಯಕ್ಷರು.— ರೂಲಿಂಗ್ ಕೊಟ್ಟು ಆಗಿದೆ Nothing will be recorded.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶಾಸಕರುಗಳಿಗೆ ಅವಮಾನ ಮಾಡತಕ್ಕ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಸದನದ ಗೌರವಗಳಿಗೆ ಚ್ಯುತಿ ತರತಕ್ಕಂಥ ಕೆಲಸವನ್ನು ಮಾಡಿದ್ದಾರೆ ಮತ್ತು Unconditional apology...ಕೇಳಿ ಇಂದರೆ ಇಲ್ಲವೆಂದು ಹೇಳುತ್ತಿದ್ದಾರೆ, ಅವರ ವರ್ತನೆಯನ್ನು ಪ್ರತಿಭಟಿಸಿ, ಮಂಡಿಸಿ ಅವರು ಹೇಳಿಕೆ ಕೊಟ್ಟಿದ್ದಕ್ಕಾಗಿ ನಾವು ಸಭೆಯಿಂದ ವಾಕ್-ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್-ಐ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಗಮನ ಸೆಳೆಯುವ ಸೂಚನೆ

೧) ರೋಣ ತಾಲ್ಲೂಕು ನಿಡಗುಂದಿ ಗ್ರಾಮದಲ್ಲಿ ವಿದ್ಯುತ್ ತಂತಿ ಬಿದ್ದಿ ೩ ಜನ ಸಾವಿಗೀಡಾಗಿರುವ ಬಗ್ಗೆ

ಶ್ರೀ ಜ್ಞಾನದೇವ ಡೊಡ್ಡನೋಟಿ.— ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಬಿದ್ದ ಮಳೆ ಗಾಳಿಯಿಂದ ರೋಣ ತಾಲ್ಲೂಕಿನ ನಿಡಗುಂದಿ ಗ್ರಾಮದಲ್ಲಿ ವಿದ್ಯುತ್ ತಂತಿ ಬಿದ್ದು ಮೂರು ಜನರು ಸಾವಿಗೀಡಾಗಿರುವ ಬಗ್ಗೆ ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಯವರು).—ಮಾನ್ಯ ಅಧ್ಯಕ್ಷರೇ,

ದಿನಾಂಕ ೩-೫-೧೯೮೮ರ ರಾತ್ರಿ ೧೦ ಘಂಟೆಯ ಸಮಯದಲ್ಲಿ ನಿಡಗುಂದಿ ಗ್ರಾಮದ ಸುತ್ತ ಮುತ್ತ ಭಾರಿ ಗುಡುಗು, ಮಿಂಚು ಮತ್ತು ಸುರಿವಂಳೆಯಾಯಿತು. ಆಗ ನಿಡಗುಂದಿ ಗ್ರಾಮದ ಹೆಣ್ಣು ಮಕ್ಕಳ ಶಾಲೆಯ ಆವರಣದಲ್ಲಿ ೪೦೦ ವೋಲ್ಟೇಜ್ ಲೈನಿನ ತಂತಿಯೊಂದು ಕಡಿದು ಭೂಮಿ ಮೇಲೆ ಬಿದ್ದಿತು. ಭಾರಿ ಮಳೆಯ ಕಾರಣ ಶಾಲಾ ಆವರಣದಲ್ಲಿ ನೀರು ನಿಂತಿದ್ದು ಕಡಿದು ಬಿದ್ದ ತಂತಿ ನೀರಿನಲ್ಲಿ ಮುಳುಗಿತ್ತು. ಹೀಗೆ ಬಿದ್ದಿದ್ದ ತಂತಿಯನ್ನು ದಾಟಲು ಹೋದ ಒಂದು ವ್ಯಕ್ತಿಗೆ ವಿದ್ಯುತ್ ಅಪಘಾತ ಉಂಟಾಯಿತು. ಈ ಅಪಘಾತಕ್ಕೊಳಗಾದ ವ್ಯಕ್ತಿಯನ್ನು ರಕ್ಷಿಸಲು ಅವರ ನೆರವಿಗೆ ಬಂದ ಇನ್ನು ಇಬ್ಬರು ವ್ಯಕ್ತಿಗಳಿಗೂ ವಿದ್ಯುತ್ ಅಪಘಾತ ಉಂಟಾಗಿ ಈ ಮೂವರು ಅಸು ನೀಗಿದರು. ಆದರೆ ರಕ್ಷಣೆಗೆ ಹೋದ ಇನ್ನೊಂದು ವ್ಯಕ್ತಿಗೆ ಸುಟ್ಟಗಾಯೆಗಳಾಗಿ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಗುಣಮುಖರಾಗುತ್ತಿದ್ದಾರೆ. ಹೀಗಾಗಿ ಅಪಘಾತದಲ್ಲಿ ೩ ಜನ ಸತ್ತಿದ್ದು ಒಬ್ಬರಿಗೆ ಸುಟ್ಟ ಗಾಯಗಳಾದವು ಈ ೪ ಜನರು ಸಾರ್ವಜನಿಕರು.

ಗಾಳಿ ಮಳೆ ಭಾರಿಯಾಗಿದ್ದುದರಿಂದ ತಂತಿ ಜೋತು ಹೊಡೆದು ತುಂಡಾಯಿತು. ಹೀಗೆ ತುಂಡಾದ ಕೂಡಲೇ ನೆಲದ ಮೇಲೆ ಬಿದ್ದಿತು ಆದರೆ ತಂತಿಯಲ್ಲಿ ವಿದ್ಯುತ್ ಪ್ರವಾಹವಿದ್ದುದರಿಂದ ಮೇಲ್ಕಂಡ ಅಪಘಾತ ಉಂಟಾಯಿತು. ವಿದ್ಯುತ್ ತಂತಿ ಕಡಿದುದು ಅನಿರೀಕ್ಷಿತ ಮುಂಗಾರಿನ ಮುಂಚೆ ವಿದ್ಯುತ್ ಮಾರ್ಗಗಳ ತಪಾಸಣೆ ಮಾಡಲಾಗುತ್ತಿದೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)